**◆ ನೀವು ಅಸ್ಸಾಮಿನ 'ಮಿಸಿಂಗ್' ಬುಡಕಟ್ಟಿಗೆ ಸೇರಿದವರು. ಈ ಜನಸಮುದಾಯದ ಬಗ್ಗೆ ಸ್ವಲ್ಪ ಹೇಳಿ. ಆಧುನಿಕತೆಯು ಈ ಸಮುದಾಯದ ಮೇಲೆ ಯಾವ ಬಗೆಯ ಪರಿಣಾಮ ಬೀರಿದೆ?**

'ಮಿಸಿಂಗ್' ಬುಡಕಟ್ಟು ಅಸ್ಸಾಂ ರಾಜ್ಯದಲ್ಲಿ, ಟಿಬೆಟೋ-ಬರ್ಮನ್ ಭಾಷೆಗಳನ್ನು ಮಾತನಾಡುವ ಸಮುದಾಯಗಳಲ್ಲಿ ಜನಸಂಖ್ಯೆಯ ದೃಷ್ಟಿಯಿಂದ ಎರಡನೆಯದು. ಈ ಸಮುದಾಯವು ಬಹುಮಟ್ಟಿಗೆ ಅಸ್ಸಾಮಿನ ಮೇಲುಭಾಗದಲ್ಲಿ, ಬ್ರಹ್ಮಪುತ್ರ ಮತ್ತು ಸುಬನ್‌ಸಿರಿ (ಸ್ವರ್ಣಸಿರಿ) ನದಿಗಳ ದಡದಲ್ಲಿ ನೆಲೆಸಿದೆ. ಹರಿಯುವ ಹೊಳೆಯ ಬದಿಯಲ್ಲಿ ಬದುಕಬೇಕಾಗಿರುವುದರಿಂದ, ನಾವು 'ಸ್ಟಿಲ್ಟ್' ಮನೆಗಳನ್ನು ಕಟ್ಟುತ್ತೇವೆ. ಇವು ಬಿದಿರು, ಬೆತ್ತ ಮತ್ತು ಒಣಹುಲ್ಲುಗಳನ್ನು ಬಳಸಿ ನಿರ್ಮಿಸುವ ಮನೆಗಳು. ಮೇಲಿಂದ ಮೇಲೆ ಎದುರಿಸಬೇಕಾದ ಪ್ರವಾಹಗಳಿಂದ ಸುರಕ್ಷಿತವಾಗಿರಲೆಂದು ಹೀಗೆ ಮನೆ ಕಟ್ಟಿಕೊಳ್ಳುತ್ತೇವೆ.

ಮಿಸಿಂಗ್ ಸಮುದಾಯದ ಭಾಷೆಗೆ ತನ್ನದೇ ಆದ ಲಿಪಿ ಇಲ್ಲ. ಒಂದು ನಂಬಿಕೆಯ ಪ್ರಕಾರ ಈ ಭಾಷೆಗೆ ಹಿಂದೊಮ್ಮೆ ಪ್ರತ್ಯೇಕವಾದ ಲಿಪಿ ಇತ್ತು. ಅವರು ಅದನ್ನು ಜಿಂಕೆಯ ಚರ್ಮದ ಮೇಲೆ ಬರೆಯುತ್ತಿದ್ದರಂತೆ. ಒಂದು ದಿನ ಆಕಸ್ಮಿಕವಾಗಿ ಅವರು ಆ ಜಿಂಕೆಯ ಚರ್ಮವನ್ನು ತಿಂದುಬಿಟ್ಟರಂತೆ. ಅದರೊಂದಿಗೆ ಲಿಪಿಯೂ ನಾಶವಾಯಿತು ಎನ್ನುತ್ತಾರೆ. ಈ ನಂಬಿಕೆಯ ಪ್ರಕಾರ 'ಮಿಸಿಂಗ್' ಲಿಪಿಯು ಅವರ ಹೊಟ್ಟೆಯೊಳಗಡೆಯೇ ಉಳಿದಿದೆ. ಆದರೆ ಈ ಸಮುದಾಯದ ನಾವು ಈಗಲೂ ಮಿಸಿಂಗ್ ಭಾಷೆಯಲ್ಲಿ ಮಾತಾಡುತ್ತೇವೆ. ರೋಮನ್ ಅಥವಾ ದೇವನಾಗರಿಯಲ್ಲಿ ಬರವಣಿಗೆ ಮಾಡುತ್ತೇವೆ. ಮಿಸಿಂಗ್ ಭಾಷೆಯು ಶಿಕ್ಷಣದ ಪ್ರಾಥಮಿಕ ಅಗತ್ಯಗಳಿಗೂ ಸಾಕಾಗುವುದಿಲ್ಲವಾದ್ದರಿಂದ ಈ ಸಮುದಾಯದ ಮಕ್ಕಳು ಅಸ್ಸಾಮೀ ಮಾಧ್ಯಮದ ಶಾಲೆಗಳಲ್ಲಿ ಕಲಿಯುತ್ತಾರೆ. ಮಿಸಿಂಗ್ ಬುಡಕಟ್ಟಿಗೆ ತನ್ನದೇ ಆದ ಶ್ರೇಷ್ಠ ಜನಪದ ಸಾಹಿತ್ಯದ ಪರಂಪರೆಯಿದೆ. ಅದರಲ್ಲಿ ಕವಿತೆ, ಹಾಡು, ಕಥೆಗಳು, ಜಾನಪದ ನಂಬಿಕೆಗಳು ಸೇರಿವೆ. ಅವು ಈ ಜನರ ಸಾಂಸ್ಕೃತಿಕ ಪರಂಪರೆಗೆ ಕನ್ನಡಿ ಹಿಡಿಯುತ್ತವೆ. ಮುಖ್ಯವಾಗಿ, ಪ್ರಕೃತಿ ಪೂಜಕರಾದ ಈ ಜನರು ಸೂರ್ಯ-ಚಂದ್ರರನ್ನು ದೇವತೆಗಳೆಂದು ಪೂಜಿಸುತ್ತಾರೆ. ಮಿಸಿಂಗ್ ನಂಬಿಕೆಯ ಪ್ರಕಾರ 'ಸೂರ್ಯ' ತಾಯಿ ದೇವತೆ ಮತ್ತು 'ಚಂದ್ರ' ತಂದೆ ದೇವತೆ. ದ್ವಿಭಾಷಿಕರಾಗಿ, ಎರಡು ಸಂಸ್ಕೃತಿಗಳಲ್ಲಿ ಆಳವಾಗಿ ಬೇರುಬಿಟ್ಟಿರುವ ಈ ಸಮುದಾಯವು ಅಸ್ಸಾಮೀ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಗಳಿಗೆ ಮಹತ್ವದ ಕಾಣಿಕೆ ನೀಡಿದ್ದಾರೆ.

ಆಧುನಿಕತೆಯ ಹೆಸರಿನಲ್ಲಿ ಜಾಗತೀಕರಣವು ಉಂಟು ಮಾಡಿರುವ ವಿಭಿನ್ನ ಬದಲಾವಣೆಗಳು ನಮ್ಮಂತಹ ಅತಿ ಚಿಕ್ಕ ಜನಾಂಗಿಕ ಗುಂಪುಗಳ ಅಸ್ತಿತ್ವದ ಮೇಲೆ ಖಂಡಿತವಾಗಿ ವ್ಯತಿರಿಕ್ತ ಪ್ರಭಾವವನ್ನು ಬೀರಿದೆ. ಈ ಕೆಡುಕು, ಹಾನಿಯ ಪರಿಣಾಮವು ಜನಾಂಗಿಕ ಗುಂಪುಗಳ ಒಳಗಡೆಗೆ ಮಾತ್ರ ಸೀಮಿತವಾಗಿಲ್ಲ. ಎಲ್ಲೋ ಅಲ್ಲೊಂದು ಇಲ್ಲೊಂದು ಸಕಾರಾತ್ಮಕವಾದ ಉದಾಹರಣೆಗಳನ್ನು ಹೊರತುಪಡಿಸಿ ಇದು ಭಾರತೀಯ ಸಮಾಜ ಮತ್ತು ಒಟ್ಟಾರೆ ಬದುಕನ್ನೂ ಬಾಧಿಸಿದೆ ಅನ್ನಿಸುತ್ತದೆ. ಆದರೆ ಈಗ ಪರಿಸ್ಥಿತಿ ಸ್ವಲ್ಪ ಬದಲಾಗುತ್ತಿರುವಂತೆ ಕಾಣುತ್ತಿದೆ, ಜನರು ಜಾಗರೂಕರಾಗಿದ್ದಾರೆ. ಆಧುನಿಕತೆಯ ಹೆಸರಿನಲ್ಲಿ ಉಂಟಾಗುತ್ತಿರುವ ಬದಲಾವಣೆಯು ತಮ್ಮನ್ನು ಸಮಾಜೋ-ಸಾಂಸ್ಕೃತಿಕ ಮತ್ತು ಭಾಷಿಕ ಬೇರುಗಳಿಂದ ಪ್ರತ್ಯೇಕಿಸುತ್ತಿರುವುದರ ಬಗ್ಗೆ ಅರಿವುಳ್ಳ ಜನಾಂಗಿಕ ಗುಂಪುಗಳು ಈ ಕುರಿತು ಎಚ್ಚರಿಕೆಯಿಂದ ಇದ್ದಾರೆ ಅನ್ನಿಸುತ್ತದೆ.

**◆ ನಿಮ್ಮ ಕವಿತೆಗಳಲ್ಲಿ 'ನಿರೂಪಕ' ಮತ್ತು 'ನಿರೂಪಣೆ'ಗಳ ಮೇಲೆ ಹೆಚ್ಚು ಒತ್ತು ನೀಡುತ್ತೀರಿ. ಕಾಲದಿಂದ ಕಾಲಕ್ಕೆ ನೀವು ಕಂಡುಕೊಂಡ ನಿರೂಪಣಾ ವಿಧಾನಗಳು ಯಾವ ಬಗೆಯವು?**

ಕಾವ್ಯದಲ್ಲಿ ಅಭಿವ್ಯಕ್ತಿಯ ಶೈಲಿ ಅನ್ನೋದು ಬಹಳ ಮುಖ್ಯ. ನುಡಿಯ ಬಳಕೆಯಲ್ಲಿ ಮತ್ತು ವಿಚಾರ, ಭಾವನೆಗಳನ್ನು ತಿಳಿಯಪಡಿಸುವ ಧ್ವನಿಯನ್ನು ನಿಭಾಯಿಸುವಲ್ಲಿ ಮತ್ತು ಸಹೃದಯರನ್ನು ಸೆಳೆಯುವ ನಿಟ್ಟಿನಲ್ಲಿ ಒಬ್ಬ ಕವಿಯ ಚಾಕಚಕ್ಯತೆಯು ಮುಖ್ಯ ಪಾತ್ರ ವಹಿಸುತ್ತದೆ. ಅಷ್ಟಕ್ಕೂ, ಕಾವ್ಯರಚನೆಯಲ್ಲಿ ಧಾಳಾಗಿ ಕಾಣುವಂತದ್ದು ಕಲಾತ್ಮಕವಾದ ಧ್ವನಿಯೇ. ಒಬ್ಬ ಕವಿಯ ಔನ್ನತ್ಯ ಮತ್ತು ಸ್ವಂತಿಕೆಯನ್ನು, ಆತನ/ಆಕೆಯ ಅಭಿವ್ಯಕ್ತಿಯ ಶೈಲಿ ಹಾಗೂ ಕಾವ್ಯಾತ್ಮಕ ಆಕೃತಿಯನ್ನು